ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 94- 97
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ದಾಸ ಸಾಹಿತ್ಯದಲ್ಲಿ ಅನುಭಾವದ ಪರಿಕಲ್ಪನೆ

**ತಿಪ್ಪಣ್ಣ ಬ. ಕಂಬಾಗಿ***

*ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

***Abstract:***

*ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುಮಾರು 13ನೇ ಶತಮಾನದಿಂದ 17ನೇ ಶತಮಾನದವರೆಗೂ ನಡೆದಿರುವಂಥ ದಾಸ ಸಾಹಿತ್ಯವು ಮಾನವ ಜೀವನದ ಮೌಲ್ಯಗಳನ್ನು ಜನರಲ್ಲಿ ಬಿತ್ತುವ ಕೆಲಸ ಮಾಡಿದೆ. ಮನುಷ್ಯನು ತನ್ನನ್ನು ತಾನು ಹಣ, ಕೀರ್ತಿ, ದುರಾಸೆಗಳ ಬೆನ್ನುಹತ್ತಿ ತನ್ನ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳದೆ ಕೆಟ್ಟ ಕೆಲಸಗಳಲ್ಲಿ ತೊಡಗಿ ಜೀವನವನ್ನು ಹಾನಿಮಾಡಿಕೊಳ್ಳುವುದನ್ನು ತಪ್ಪಿಸುವ ಸಲುವಾಗಿ ದಾಸರು ಕೀರ್ತನೆಗಳ ಮೂಲಕ ಸಮಾಜದ ಪರಿವರ್ತನೆಗೆ ಮುಂದಾದರು ದಾಸ ಎಂದರೆ ಸೇವಕ ಎಂದರ್ಥ. ವಿಷ್ಣುವಿನ ಅವತಾರಗಳಲ್ಲಿ ಯಾವುದಾದರೊಂದು ನೆನೆದು ಕೀರ್ತನೆಗಳನ್ನು ರಚನೆ ಮಾಡುತ್ತಿದ್ದರು. ಈ ಕೀರ್ತನೆಗಳು ಕೇವಲ ಭಕ್ತಿ ಚಳುವಳಿ ಆಗದೆ ಅನುಭಾವದ ರೂಪ ಪಡೆದಿವೆ.*

**Keywords:** *ಕನ್ನಡ ಸಾಹಿತ್ಯ, ದಾಸ ಸಾಹಿತ್ಯ, ಅನುಭಾವ, ಆಧ್ಯಾತ್ಮ.*

## ಪೀಠಿಕೆ

ದಾಸರು ಆಧ್ಯಾತ್ಮದ ಹಿನ್ನೆಲೆಯಲ್ಲಿ ಬದುಕಿಗೆ ಬೇಕಾದ ಅನುಭಾವಗಳನ್ನು ಕೀರ್ತನೆಗಳ ಮೂಲಕ ಸೃಜನಶೀಲತೆಯಿಂದ ಹಾಡುಗಳನ್ನಾಗಿ ಕಟ್ಟಿ ಜನರಲ್ಲಿ ಅರಿವು ಮೂಡಿಸಿದರು. ಆ ಕಾಲದಲ್ಲಿ ದಾಸಕೂಟ ಮತ್ತು ವ್ಯಾಸಕೂಟ ಎಂಬ ಸಂಘಗಳನ್ನು ಕಟ್ಟಿಕೊಂಡು ಅನುಭಾವಿಗಳು ಹರಿಭಕ್ತಿಯ ಮೂಲಕ ಮನುಷ್ಯನಿಗೆ ಬದುಕುವ ಛಲ, ರೀತಿ, ನೀತಿ ಜೊತೆಗೆ ಪ್ರೀತಿ–ಸ್ನೇಹ, ಮಮತೆ, ಶಾಂತಿ, ಸಹಬಾಳ್ವೆ ಎಲ್ಲವನ್ನು ಬದುಕಿನಲ್ಲಿ ಕಟ್ಟಿಕೊಡಲು ಹಲವಾರು ಉದಾಹರಣೆಗಳನ್ನು ಕೊಟ್ಟು ಹಾಡಿದರು.

***ಮಾನವ ಜನ್ಮ ದೊಡ್ಡದು***
***ಇದನ್ನು ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ***
***ಕಣ್ಣು ಕಾಲು ಕಿವಿ ಇರಲಿಕ್ಕೆ***
***ಮಣ್ಣು ಮುಕ್ಕಿ ಮರಳಾಗುವರೆ?*** [1]

ದಾಸರು ಮಾನವ ಜೀವನದ ಉದ್ದೇಶಗಳನ್ನು ತಮ್ಮ ತಮ್ಮ ಅನುಭಾವಿಕ ಪದಗಳಲ್ಲಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಹಾಡಿ ತಿಳಿಸಿದ್ದಾರೆ. ಅದರಂತೆ ಬದುಕಿನ ಮುಖ್ಯ ಉದ್ದೇಶವನ್ನು ಮರೆತ

***Please cite this article as:*** ತಿಪ್ಪಣ್ಣ ಬ. ಕಂಬಾಗಿ. (2022). *ಕನ್ನಡ ದಾಸ ಸಾಹಿತ್ಯದಲ್ಲಿ ಅನುಭಾವದ ಪರಿಕಲ್ಪನೆ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 1(5), 94 –97.

ಮಾನವನಿಗೆ ದಾಸರು ಮುಕ್ತಿಯ ಕಡೆಗೆ ಕರೆದೊಯ್ಯುವ ರೀತಿ ಅನೂನ್ಯವಾದದ್ದು. "ಕನಕದಾಸರು ಹಾಡುವಂತೆ ತಲ್ಲಣಿಸದಿರು ಕಂಡ್ಯೆ ತಾಳು ಮನವೆ" ಎಂಬ ವಾಕ್ಯದಲ್ಲಿ ಜೀವನದಲ್ಲಿನ ಎಲ್ಲ ಹಾಗೂ ಹೋಗುಗಳನ್ನು ಮನುಷ್ಯನ ಪರಿಧಿಯಲ್ಲಿ ಇಲ್ಲ ಎಲ್ಲದಕ್ಕೂ ವಿಧಿ ಕಾರಣ ಎಂಬ ಅನುಭಾವಿಕ ನುಡಿಗಳು ಕೇಳಬಹುದು. ಲೌಕಿಕ ವ್ಯವಹಾರದಲ್ಲಿ ಮನುಷ್ಯನು ತಾಳ್ಮೆ, ಶ್ರದ್ಧೆ, ಭಕ್ತಿಗಳನ್ನು ತಳಿ ತನ್ನ ದ್ವೇಷ, ರೋಷಗಳ ಮೂಲಕ ಎಲ್ಲವನ್ನು ಕಳೆದುಕೊಳ್ಳುತ್ತಿದ್ದಾನೆ. ಆದ್ದರಿಂದ ತಾಳು ಮನವೇ ಎಂಬ ವಾಕ್ಯಗಳು ನಮಗೆ ಸಲುವುವವನ ಬಗ್ಗೆ ದಾಸರ ನಂಬಿಕೆಗಳನ್ನು ತಿಳಿಸುತ್ತವೆ. ಸಮಾಜದಲ್ಲಿನ ಮೌಢ್ಯಗಳನ್ನು ಮತ್ತು ಸಂಪ್ರದಾಯಸ್ಥ ವ್ಯವಸ್ಥೆಯನ್ನು ತಮ್ಮ ಕೀರ್ತನೆಗಳ ಮೂಲಕ ಖಂಡಿಸಿದ್ದಾರೆ.

***"ನರಜನ್ಮ ಬಂದಾಗ ನಾಲಿಗೆ ಇರುವಾಗ"***
***ಕೃಷ್ಣಯೆನಬಾರದೆ ಕೃಷ್ಣ ಎಂದರೆ***
***ಕಷ್ಟ ಒಂದಿಷ್ಟಿಲ್ಲ.***[2]

ಎಂಬ ವಾಕ್ಯಗಳು ಈ ಜಗತ್ತಿನಲ್ಲಿ ಮನುಷ್ಯನು ಅಪಾರ ಆಸ್ತಿ–ಪಾಸ್ತಿ, ಏನೆಲ್ಲ ಗಳಿಸಿದರು ಮನಃಶಾಂತಿಯನ್ನು ಗಳಿಸಲು ಮತ್ತು ಆತ್ಮ ತೃಪ್ತಿಯನ್ನು ಪಡೆಯಲು ಈ ಜೀವನದಲ್ಲಿ ಭಕ್ತಿಯ ಮಾರ್ಗವು ತುಂಬಾ ಅವಶ್ಯಕವಾದದ್ದು ಎಂದು ಸಾರಿದರು. ಜನರಿಗೆ ಧರ್ಮ–ನೀತಿಗಳನ್ನು ಒಳಗೊಂಡಂತೆ ಕೀರ್ತನೆ ಮತ್ತು ಉಗಾ ಭೋಗಗಳ ಮೂಲಕ ಜನರಿಗೆ ಅನುಭಾವವನ್ನು ನೀಡಿದರು. "ಗಿಳಿಯು ಪಂಜರದೊಳಿಲ್ಲ" "ಅಂಬಿಗ ನಾ ನಿನ್ನ ನಂಬಿದೆ" "ಎನ್ನ ಮನದ ದೊಂಕು ತಿದ್ದೆಯಾ" ಎಂಬಂತಹ ಕೀರ್ತನೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ಅನುಭಾವದ ರಸವನ್ನು ಉಣಬಡಸಿದರು. ಎಲ್ಲ ಕೀರ್ತನೆಗಳು "ಆತ್ಮ ಉನ್ನತಿ, ಆತ್ಮವಿಮರ್ಶೆ, ನಿಂದನೆ, ಮುಕ್ತಿ, ನೀತಿ ಮತ್ತು ತತ್ವಗಳನ್ನು ಸಾರುವುದಾಗಿದೆ.

ದಾಸ ಸಾಹಿತ್ಯವು ಕೇವಲ ಒಂದು ವರ್ಗಕ್ಕೆ ಸಿಮಿತವಾಗದೆ. ಮೇಲು–ಕೀಳು, ಬಡವ, ಬಲ್ಲಿದ, ಬ್ರಾಹ್ಮಣ, ದಲಿತ, ಅರಮನೆ, ಗುರುಮನೆ ಎನ್ನದೆ ಎಲ್ಲರಿಗೂ, ಎಲ್ಲ ಕಾಲಕ್ಕೂ ಹೊಂದುವಂತಿರುವುದು ದಾಸ ಸಾಹಿತ್ಯದ ವಿಶೇಷತೆ ಎಲ್ಲ ಮತ ಮಾನ್ಯ, ಗುಡಿ ಗುಂಡಾರಗಳಲ್ಲಿ ದಾಸರ ಕೀರ್ತನೆಗಳು ಸ್ಥಾನವನ್ನು ಪಡೆದಿವೆ. ಸಮಾಜದಲ್ಲಿನ ಪ್ರತಿಯೊಂದು ಸಮುದಾಯಗಳನ್ನು ಒಳಗೊಂಡಂತೆ ಕೀರ್ತನೆಗಳನ್ನು ರಚಿಸಿ ಅವರವರ ಸಂಪ್ರದಾಯಗಳನ್ನು ಶ್ರದ್ಧೆ, ಭಕ್ತಿಗಳನ್ನು ಗೌರವಿಸುವ ರೀತಿಯಲಿ ಸಾಹಿತ್ಯವನ್ನು ನೀಡಿದ್ದಾರೆ. ಇದರಿಂದ ಜನರ ಮನಸ್ಸು ಧಾರ್ಮಿಕ ನೆಲೆಯಲ್ಲಿ ಉಳಿಯುವಂತೆ ಮಾಡಿದ್ದಾರೆ. ಎಲ್ಲ ವರ್ಗಗಳನ್ನು ಒಳಗೊಂಡಂತೆ ಅವುಗಳಲ್ಲಿರುವ ಮೌಢ್ಯ, ಅಂಧಾನುಕರಣೆ ಖಂಡಿಸಿ ಬದುಕಿಗೆ ಮುಕ್ತಿಯ ಮಾರ್ಗವನ್ನು ತೋರಿಸಿದರು.

ಕನ್ನಡ ದಾಸ ಪರಂಪರೆಯಲ್ಲಿ ನಮಗೆ ಪ್ರಮುಖರಾಗಿ ಕಾಣಿಸುವವರೆಂದರೆ, ದಾಸ ಸಾಹಿತ್ಯದ ಅಶ್ವಿನಿ ದೇವತೆಗಳು ಎಂದೆ ಹೆಸರಾದ ಪುರಂದರ ದಾಸರು ಮತ್ತು ಕನಕದಾಸರು. ಆದರೆ ದಾಸರಲ್ಲಿ ವ್ಯಾಸಕೂಟ ಎಂಬ ಒಂದು ಸಂಘದಲ್ಲಿ ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು ಪ್ರಮುಖರಾದರೆ ದಾಸಕೂಟ ಎಂಬ ಸಂಘಗಳಲ್ಲಿ ಶ್ರೀ ಪುರಂದರ ದಾಸರು, ಶ್ರೀ ಕನಕದಾಸರು, ಶ್ರೀ ವಿಜಯದಾಸರು ಪ್ರಮುಖರಾಗಿದ್ದಾರೆ. ವ್ಯಾಸಕೂಟವು, ಸಂಸ್ಕೃತ ಪಾಂಡಿತ್ಯವನ್ನು ಹೊಂದಿರುವುದಾದರೆ, ದಾಸಕೂಟವು ಸಾಮಾನ್ಯ ಜನರ ಭಾಷೆಯಲ್ಲಿಯೇ ತಮ್ಮ ಕೀರ್ತನೆಗಳನ್ನು ರಚಿಸಿ ಭಗವಂತನ ಭಕ್ತಿಗೆ ಭಾಷೆ ಮತ್ತು ಪಾಂಡಿತ್ಯದ ಅವಶ್ಯಕತೆ ಇಲ್ಲಿ ಭಕ್ತಿ ಸಾರು ಎಂದು ಸಾರಿದರು. ದೇವರ ಭಕ್ತಿಗೆ ಯಾವುದೇ

ಮೈಲಿಗೆ, ಕುಲ ಲಿಂಗಗಳ ಭೇದಭಾವವಿಲ್ಲ ಎಂದು ಸಾರಿದರು. ಪ್ರತಿಯೊಬ್ಬರು ಭಕ್ತಿಯ ಮೂಲಕ ದೈವದ ಅನುಗ್ರಹ ಪಡೆಯಬಹುದು ಎಂಬುಹುದು ದಾಸರ ನಿಲುವಾಗಿತ್ತು.

***ಅನುಭಾವದಡಿಗೆಯ ಮಾಡಿ***
***ಅನುಭವಿಗಳ ಬಂದು ನೀವೆಲ್ಲ ಕೂಡಿ***
***ತನುವೆಂಬ ಭಾಂಡವ ತೊಳೆದು***
***ನಿತ್ಯ ನಿರ್ಮಲಯತೆಂಬ ನೀರೆಸರಿಟ್ಟು.***[3]

ಅನುಭವದ ಆಧಾರದಲ್ಲಿ ಆಧ್ಯಾತ್ಮವನ್ನು ಜೊತೆಗೂಡಿಸಿ ಜೀವನದಲ್ಲಿ ನಡೆಯಬೇಕು ಎಂದು ತಿಳಿಸುವ ಈ ಸಾಲುಗಳು ಜೀವನಕ್ಕೆ ಮೂಲ ಸೂತ್ರದಾರನಾದ ಭಗವಂತನನ್ನು ನೆನೆವುದರ ಮೂಲಕ ಮನಸ್ಸನ್ನು ನಿತ್ಯ ನಿರ್ಮಲವಾಗಿಸಬೇಕು ಎಂಬುದಾಗಿದೆ. ಅದೇ ರೀತಿ ಸಾರಿದ ದಾಸರು ಭಗವಂತನನ್ನು ಸೇರಲು ಜ್ಞಾನ ಮತ್ತು ಭಕ್ತಿಯ ದಾರಿಯನ್ನು ಜನರಿಗೆ ತೋರಿಸಿದರು. ಅದಕ್ಕೆ ಅವರು ಆರಿಸಿಕೊಂಡ ಮಾರ್ಗ ಕೀರ್ತನೆಗಳೆಂಬ ಸಾಹಿತ್ಯದ ರೀತಿಯಾಗಿದೆ. ಅನುಭಾವವನ್ನು ಸಾಹಿತ್ಯವಾಗಿ ಪರಿವರ್ತಿಸಿ ಅದಕ್ಕೆ ಸಂಗೀತದ ಸ್ಪರ್ಶ ನೀಡಿದರು. ಇದರಿಂದ ದಾಸರ ಕೀರ್ತನೆಗಳು ಜನರ ಮನಸ್ಸಿಗೆ ಅತಿ ವೇಗವಾಗಿ ಮುಟ್ಟಿದವು ಎಂದು ಹೇಳಬಹುದು. ಅನುಭಾವವನ್ನು ಪಡೆಯಲು ಮನುಷ್ಯರು ತಮ್ಮ ಹರಿಷಡ್ವರ್ಗಗಳ ನಿಯಂತ್ರಣ ಅತಿಮುಖ್ಯವಾದದ್ದು. ಜೊತೆಗೆ ದೈವ ಒಲುಮೆವು ಸಿಗಬೇಕಾದರೆ ಆಧ್ಯಾತ್ಮದ ಸವಿಯೂಟ ಉಣಬೇಕು. ಅದು ಭಕ್ತಿಯ ಮಾರ್ಗವಾಗಿ ಎಂದು ಎಲ್ಲ ಹರಿದಾಸರೂ ತಮ್ಮ ಕೀರ್ತನೆಗಳ ಮುಖಾಂತರ ಸಾರಿದರು.

ದಾಸರನ್ನು ಹರಿದಾಸರು ಎಂದು ಕರೆಯುತ್ತಿದ್ದರು. ಕಾರಣ ದಾಸ ಪರಂಪರೆಯೂ ವೈಷ್ಣವ ಮತದ ಮೂಲವೆಂದು ಹೇಳಬಹುದು. ಈ ಪಂಥದಲ್ಲಿ ಬಹುತೇಕ ಬ್ರಾಹ್ಮಣರೆ ಇದ್ದರೂ ಸಮಾಜದ ಎಲ್ಲ ವರ್ಗಗಳ ಜನಗಳಿಗೆ ಇವರ ಕೊಡುಗೆ ಮುಟ್ಟಿದೆ ಎಂದು ಹೇಳಬಹುದು.

ಕರ್ನಾಟಕದ ಭಕ್ತಿ ಚಳುವಳಿಯಲ್ಲಿ ಹರಿದಾಸರ ಕೊಡುಗೆ ಅಪಾರವಾದದ್ದು ಅವರ ಅನುಭಾವವು ಜೀವನದಲ್ಲಿ ಎಂತಹ ಕಷ್ಟ ಕಾರ್ಪಣ್ಯಗಳು ಬಂದು "ಈಸಬೇಕು ಇದ್ದು ಜಯಿಸಬೇಕು" ಎಂಬ ದಾಸರ ಅನುಭಾವಿಕ ಹಾಡುಗಳು, "ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ?" ಎಂದು ಸಮಾಜದಲ್ಲಿನ ವರ್ಗ, ಸಂಘರ್ಷಗಳ ಬಗ್ಗೆ ಇರುವ ಯೋಚನೆಯನ್ನು ಕ್ರಾಂತಿಕಾರವಾಗಿ ನುಡಿದು ಸಂಪ್ರದಾಯಸ್ತರಿಗೆ ಚಾಟಿ ಎಟು ನೀಡಿದರು.

***ಕಲ್ಲು ಸಕ್ಕರೆ ಕೊಳ್ಳಿರೊ ನೀವೆಲ್ಲರು***
***ಕಲ್ಲು ಸಕ್ಕರೆ ಕೊಳ್ಳಿರೋ***
***ಕಲ್ಲು ಸಕ್ಕರೆ ಸವಿಯ ಬಲ್ಲವರೇ ಬಲ್ಲರು***
***ನಷ್ಟ ಬೀಳುವುದಲ್ಲ ನಾಚ ಹುಟ್ಟುವುದಲ್ಲ***
***ಎಷ್ಟು ಒಯ್ದರು ಬೆಲೆಯ ರೊಕ್ಕವಿದಕ್ಕಿಲ್ಲ***

ಎಂಬ ಅವರ ನುಡಿಗಳು ಆಧ್ಯಾತ್ಮದ ರುಚಿಯನ್ನು ಪಡೆಯಲು ಉತ್ತೇಜಿಸುವಂತೆ ತೋರುತ್ತವೆ. ಕ್ಲು ಸಕ್ಕರೆಯನ್ನು ಆಧ್ಯಾತ್ಮಕ್ಕೆ ಹೋಲಿಸಿ ಅದು ಯಾವತ್ತು ಕೆಡುವುದಿಲ್ಲ ಎಂದು ಸಾರಿದವರು ಆಧ್ಯಾತ್ಮದ ಚಿಂತನೆಯಲ್ಲಿ ಜನರು ಬೇರೆತು ಹೋದಾಗ ಮಾತ್ರ ಆತ್ಮ ತೃಪ್ತಿಯನ್ನು ಪಡೆಯಲು ಸಾಧ್ಯ ಎಂಬುದು ದಾಸರ ನಿಲುವಾಗಿತ್ತು. ದಾಸರು ಹೇಳುವಂತೆ ಸಂಸಾರವೆಂಬ ಸಾಗರದಲ್ಲಿ ಮಾನವ ತನ್ನ ಭೋಗ

ವ್ಯವಸ್ಥೆಯಲ್ಲಿ ಆತ್ಮಾನಂದವನ್ನು ಮರೆತು ಕ್ಷಣಿಕ ಸುಖಕ್ಕಾಗಿ ಅಲೆದಾಡುತ್ತಿದ್ದಾನೆ. "ಕಮಲದೆಲೆಯ ನೀರಿನಂತೆ ಸಂಸಾರದಲ್ಲಿರಬೇಕು ಇಲ್ಲದಿರೇಕು" ಎಂಬಂತಹ ಕೀರ್ತನೆಯ ಸಾಲುಗಳು ಇದಕ್ಕೆ ನಿದರ್ಶನಗಳಾಗಿವೆ. ಅದರಂತೆ ದೇವರ ವಿಚಾರದಲ್ಲಿ ಅವರ ನಿಲುವು "ಎಲ್ಲರನ್ನು ಸಲಹುವವನು ಇದಕೆ ಸಂಶಯವಿಲ್ಲ" ಎಂಬಂತಹ ಬರವಸೆಯನ್ನು ನೀಡಿದವರು ಹಾಗೆಯೇ ಗುರುವಿನ ಬಗ್ಗೆ ಅವರು ಹೇಳಿರುವಂತವು ಎಂದರೆ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಗುರುವಿನ ಅನುಗ್ರಹ ಆಧ್ಯಾತ್ಮ ಮತ್ತು ಭಗವಂತನ ದರುಶನ ಸಾಧ್ಯ ಎಂಬುದು ದಾಸರೆಲ್ಲರು. "ಹರಿಸರ್ವೋತ್ತಮ, ವಾಯು ಜೀವೊತ್ತಮ" ಎಂಬ ತಾತ್ವಿಕ ನೆಲೆಯೊಂದಿಗೆ ಕೀರ್ತನೆಗಳನ್ನು ಭಕ್ತಿಯ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ಅವರ ಪ್ರಕಾರ ಶ್ರೀ ಹರಿಯೇ ಸರ್ವೋತ್ತಮನು ಎಂಬುದಾಗಿತ್ತು. ಹನ್ನೆರಡನೇ ಶತಮಾನದಲ್ಲಿ ಶಿವ ಶರಣರು ಶೈವ ಪಂಥವನ್ನು ಬೆಳೆಸಿದಂತೆ ದಾಸರು ವೈಷ್ಣವ ಪಂಥವನ್ನು ಬೆಳೆಸಿ ಮುನ್ನೆಡೆಸಿದರು ಎನ್ನಬಹುದು.

**ಉಪಸಂಹಾರ**

ಕನ್ನಡ ದಾಸ ಸಾಹಿತ್ಯದಲ್ಲಿ ನೋಡುವುದಾದರೆ ಸುಮಾರು ಹದಿಮೂರನೆ ಶತಮಾನದಿಂದ ಹದಿನೇಳನೇ ಶತಮಾನದವರೆಗೂ ಆಗಿರುವಂತಹ ದಾಸರಲ್ಲಿ ಅನೇಕ ಯತಿಗಳು, ಕವಿಗಳು, ಪಂಡಿತರು ಆಗಿಹೋಗಿದ್ದಾರೆ. ಇವರುಗಳಲ್ಲಿ ಪ್ರಮುಖರಾದವರೆಂದರೆ, ಶ್ರೀನರಹರಿ ತೀರ್ಥರು, ಶ್ರೀ ವ್ಯಾಸರಾಯರು, ಶ್ರೀ ಪಾದರಾಯರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ರಾಘವೇಂದ್ರ ಗುರು ಸಾರ್ವಭೌಮರು ತಮ್ಮ ತಮ್ಮ ಕಾಲದಲ್ಲಿ ಇವರೆಲ್ಲರು ವೈಷ್ಣವ ಭಕ್ತಿಯ ಜೊತೆಗೆ ಸಮಾಜದಲ್ಲಿನ ಎಲ್ಲ ವರ್ಗಗಗಳನ್ನು ಒಳಗೊಂಡಂತೆ ಪ್ರತಿಯೊಂದನ್ನು ತಮ್ಮ ಕೀರ್ತನೆಗಳ ಅಥವಾ ಉಗಾಭೋಗಗಳ ಮೂಲಕ ಜನಸಾಮಾನ್ಯರಲ್ಲಿರುವ ಮೌಢ್ಯತೆಯನ್ನು ಹೋಗಲಾಡಿಸಿ ಜನರಿಗೆ ಆಧ್ಯಾತ್ಮಿಕ ದಾರಿಯನ್ನು ತೋರಿದರು ಹಾಗೂ ತಮ್ಮ ಅನುಭವವಗಳನ್ನು ಕೀರ್ತನೆಗಳ ಮೂಲಕ ಜನರಿಗೆ ತುಲುಪಿಸುವಲ್ಲಿ ಯಶಸ್ವಿಯಾಗಿದ್ದರೆ. ಸುಮಾರು ಐದು–ಆರು ಶತಮಾನಗಳ ಕಾಲ ಹಳೆಯದಾದರೂ ದಾಸರ ಕೀರ್ತನೆಗಳು ಪ್ರಸ್ತುತ ಕಾಲದಲ್ಲಿ ಇನ್ನು ತಮ್ಮ ಅನುಭಾವದ ಬೆಳಕನ್ನು ನೀಡುತ್ತಿವೆ. ದೈವ–ಧರ್ಮ, ನೀತಿ–ರೀತಿ ಗಳ ಬಗ್ಗೆ ಜನರಿಗೆ ಅರಿವು ಮೂಡಿಸುವಲ್ಲಿ ದಾಸರ ಕೀರ್ತನೆಗಳು ಸಹಕಾರಿಯಾಗಿವೆ. ಆದ್ದರಿಂದ ಎಲ್ಲ ಕಾಲಕ್ಕೂ ಹೊಂದಿಕೊಳ್ಳಬಲ್ಲ ಸಾಹಿತ್ಯ ರಚಿಸಿದ ದಾಸರು ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ.

**ಕೊನೆಟಿಪ್ಪಣಿ**

1. ದೇವಕನ್ನಿಕಾ ನಗರ್‌ಕರ್. (2014). *ಕನ್ನಡ ಸಾಹಿತ್ಯದಲ್ಲಿ ಅನುಭಾವ.* ಪು.ಸಂ.97.
2. ಅದೇ. ಪು.ಸಂ.97.
3. ಅದೇ. ಪು.ಸಂ.96.

**ಪರಾಮರ್ಶನ ಗ್ರಂಥಗಳು**


- ದೇವಕನ್ನಿಕಾ ನಗರ್‌ಕರ್. (2014). *ಕನ್ನಡ ಸಾಹಿತ್ಯದಲ್ಲಿ ಅನುಭಾವ.* ಅಜೀತ ಪ್ರಕಾಶನ.
- ತಿಪ್ಪೆರುದ್ರಸ್ವಾಮಿ ಎಚ್. (2019). *ಕನ್ನಡದಲ್ಲಿ ಅನುಭಾವ ಸಾಹಿತ್ಯ.* ಡಿ.ವಿ.ಕೆ ಮೂರ್ತಿ ಪ್ರಕಾಶನ.
- ಮುಗಳಿ ರಂ.ಶ್ರೀ (2020). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.